Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 4/2016

ಪ್ರಾ.ಸಾ. 2 ಚಾ.ಸಾ. 6

| | | |
|---|---|---|
| ಹೆಸರು | : | ಹಣಮಂತ್ರಾಯ |
| ತಂದೆಯ ಹೆಸರು | : | ರಾಮಲಿಂಗಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸ | : | ಕಿರದಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 05-04-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ-1, 4, 5 ಮತ್ತು 7 ಹಾಗೂ ನಾನು ಮಾದಿಗ ಪರಿಶಿಷ್ಟ ಜಾತಿಗೆ ಸೇರಿದವರು. ಆರೋಪಿತರ ಪರಿಚಯ ಇದೆ. ಅವರಲಿ ಲಿಂಗಾಯತ ಜಾತಿಗೆ, ಕೆಲವರು ಹೊಲೆಯ ಜಾತಿಗೆ ಸೇರಿದವರಾಗಿರುತ್ತಾರೆ.

2. ಈಗ್ಗೆ 9 ವರ್ಷ 5 ತಿಂಗಳ ಹಿಂದೆ ನಾನು ಕಿರದಳ್ಳಿ ಗ್ರಾಮದ ನಮ್ಮ ಹೊಲದಲ್ಲಿ ಕೆಲಸ ಮಾಡಿಕೊಂಡು ವಾಪಾಸ ಮನೆಗೆ ಬರುತ್ತಿರುವಾಗ ಅಂದಾಜು ರಾತ್ರಿ 7-20 ಗಂಟೆಗೆ ಹತ್ತು ಹದಿನಿಮಿಷ ಹೆಚ್ಚು ಅಥವಾ ಕಮ್ಮಿ ಇರುವಾಗ ಮಡಿವಾಳಪ್ಪ ಹರಿಜನ ಓಣಿಯಲ್ಲಿ ನಾನು, ಚಾಸಾ-4, 5 ಮತ್ತು 7 ಬರುತ್ತಿದ್ದಾಗ ಅಲ್ಲಿ ಗಲಾಟೆಯಾಗುತ್ತಿತ್ತು. ನಾನು ರಸ್ತೆಯಲ್ಲಿ ಬರುತ್ತಿದ್ದಾಗ ರೆಡ್ಡೆಪ್ಪಗೌಡ ನನ್ನನ್ನು ಬುಲೇರೊ ವಾಹನದಲ್ಲಿ ಕರೆದುಕೊಂಡು ಬಂದು ಮಡಿವಾಳಪ್ಪ ಅವರ ಓಣಿಯ ಬಳಿ ಬಿಟ್ಟು ನಂತರ ಈತನನ್ನು ಕರೆದುಕೊಂಡು ಬಂದು ಬಿಟ್ಟಿದ್ದೇನೆ ಮಾದಿಗ ಸೂಳೇ ಮಗನದು ಸೊಕ್ಕು ಬಹಳ ಆಗಿದೆ ಜೀವ ಸಹಿತ ಹೊಡೆದು ಬಿಡಿ ಎಂದು ಹೇಳಿದ. ಚಾಸಾ-5 ದೇವಪ್ಪ, ಚಾಸಾ-4 ಅಂಬ್ರೇಶ, ಚಾಸಾ-7 ನಿಂಗಮ್ಮ ಅವರುಗಳು ಬಂದು ಯಾಕೆ ಗಲಾಟೆ ಮಾಡುತ್ತಿದಿರಿ ಬಿಡಿ ಎಂದು ಆರೋಪಿತರಿಗೆ ಕೇಳಿದರು. ಆಗ ಸಾಯಬಣ್ಣ ಮತ್ತು ಮಲ್ಲಪ್ಪ ಬಂದು ಎಲ್ಲರೂ ಕಲೆತು ಯಾಕೆ ಈ ರೀತಿ ಮಾಡುತ್ತಿರಿ ಎಂದು ಕೇಳಿದರು. ಅಷ್ಟರಲ್ಲಿ ಮಡಿವಾಳಪ್ಪ ಕಟ್ಟಿಮನಿ ಈತನು ಕೊಡಲಿಯಿಂದ ನನ್ನ ತಮ್ಮ ಅಂಬ್ರೇಶನ ತಲೆಗೆ ಜೋರಾಗಿ ಹೊಡೆದ ಜೀವ ಸಹಿತ ಹೊಡೆಯಬೇಕು ಮಾದಿಗ ಸೂಳೇ ಮಗನ ಸೊಕ್ಕು ಬಹಳ ಆಗಿದೆ ಎಂದು ಹೇಳಿ ಹೊಡೆದ. ನಂತರ ಆರೋಪಿ ಸೋಮಪ್ಪ ಈತನು ಕಲ್ಲಿನಿಂದ ನನ್ನ

ತಮ್ಮನ ತೊಡೆಗೆ ಹೊಡೆದು ಒಳಪೆಟ್ಟು ಮಾಡಿದ, ಆತ ನೆಲಕ್ಕೆ ಬಿದ್ದಾಗ ರಾಮಪ್ಪ ತಂದೆ ನಿಂಗಪ್ಪ, ದೇವಪ್ಪ ತಂದೆ ಶಿವಶರಣಪ್ಪ ಇಬ್ಬರೂ ಕಾಲಿನಿಂದ ಅಂಬ್ರೇಶನಿಗೆ ಒದ್ದರು. ಅಣ್ಣ ದೇವಪ್ಪನಿಗೆ ಆರೋಪಿ ಮಡಿವಾಳಪ್ಪ ತಂದೆ ಶಿವಶರಣಪ್ಪ ಈತನು ರಾಡಿನಿಂದ ದೇವಪ್ಪನ ಬೆನ್ನು, ಎಡ ರಟ್ಟೆ ಮತ್ತು ಕಾಲಿಗೆ ಹೊಡೆದು ಬಾರಿ ಒಳಪೆಟ್ಟು ಮಾಡಿದ ಮತ್ತು ರಕ್ತ ಗಾಯ ಆಯಿತು. ಆರೋಪಿ ಮರೆಪ್ಪ ತಂದೆ ಶಿವಶರಣಪ್ಪ ಕಟ್ಟಿಮನಿ ಈತನು ಕೈ ಮುಷ್ಠಿಮಾಡಿ ನಮ್ಮ ಅಣ್ಣ ದೇವಪ್ಪನ ಬಾಯಿಗೆ ಹೊಡೆದ ಅದರಿಂದ ಎರಡೂ ತುಟಿಗಳು ಹರಿದಿತ್ತು. ನಮ್ಮ ಅಕ್ಕ ನಿಂಗಮ್ಮಳಿಗೆ ಆರೋಪಿ ವಿರೇಶ ತಂದೆ ಶಿವಶರಣಪ್ಪ ಈತನು ಕಲ್ಲಿನಿಂದ ಎಡ ಭುಜಕ್ಕೆ ಕೊಡೆದು ಒಳಪೆಟ್ಟು ಮತ್ತು ಬಾರಿ ಗಾಯ ಮಾಡಿದನು, ಆಕೆಯ ಸೀರೆ ಹಿಡಿದು ಎಳೆದಾಡಿ ಆಕೆಯ ಮಾನಭಂಗಕ್ಕೆ ಪ್ರಯತ್ನ ಪಟ್ಟನು. ನನಗೆ ಆರೋಪಿ ಮಾನಪ್ಪ ತಂದೆ ಬಸಪ್ಪ ಕಟ್ಟಿಮನಿ ಕಬ್ಬಿಣನಿಂದ ರಾಡಿನಿಂದ ನನ್ನ ತಲೆಗೆ ಹೊಡೆದು ಬಾರಿ ರಕ್ತಗಾಯ ಪಡಿಸಿದ, ಮರೆಪ್ಪ ತಂದೆ ಬಸಪ್ಪ ಕಟ್ಟಿಮನಿ ಕಲ್ಲಿನಿಂದ ನನ್ನ ಎಡ ಪಕ್ಕೆಗೆ ಹೊಡೆದು ಬಾರಿ ಒಳಪೆಟ್ಟು ಮಾಡಿದ. ಬಿಡಿಸಲು ಬಂದ ನನ್ನ ಅಣ್ಣ ಮಲ್ಲಪ್ಪನಿಗೆ ಆರೋಪಿ ಮಡಿವಾಳಪ್ಪ ತಂದೆ ಶಿವಶರಣಪ್ಪ ಕಟ್ಟಿಮನಿ ಬೆನ್ನು ಮತ್ತು ಕಪಾಳಕ್ಕೆ ಹೊಡೆದ. ನಂತರ ನಾವೆಲ್ಲರೂ ಒಂದು ಖಾಸಗಿ ಜೀಪನಲ್ಲಿ ಕೆಂಭಾವಿ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆವು. ನನ್ನ ತಮ್ಮ ಅಮರೆಶನಿಗೆ ಫಿಟ್ಸ ಬಂದು ವಾಂತಿ ಆಯಿತು. ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಇವರು ಸೊಕ್ಕು ಬಹಳ ಆಗಿದೆ ಜೀವ ಹೊಡೆಯಬೆಕು ಅಂದು ಹೋದರು. ನಾವು ಮಾದಿಗ ಜಾತಿಗೆ ಸೇರಿದ ವಿಷಯ ಆರೋಪಿತರಿಗೆ ಗೊತ್ತಾಯಿತು. ಜಾತಿ ಎತ್ತಿ ಬೈದಿದ್ದರಿಂದ ನನ್ನ ಮನಸಿಗೆ ನೊವಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿ ನಂ.೮ ಮತ್ತು ೯ ರವರನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ಆರೋಪಿತರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ. ನಂತರ ಕೆಂಭಾವಿ ಠಾಣೆಗೆ ಬಂದು ಹೇಳಿಕೆ ಕೊಟ್ಟಿರುತ್ತೇನೆ. ಮು.ಮಾ.1 ರಿಂದ 6 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವಕೀಲರಿಂದ</u>

ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.